ರಾಜ್ಯದಲ್ಲಿರುವ ಭೂ ನ್ಯಾಯ ಮಂಡಳಿಗಳು

*೨೮೯೪. ಶ್ರೀ ಎಂ. ಶಿವಣ್ಣ (ಹೆಚ್.ಡಿ. ಕೋಟೆ).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಭೂ ನ್ಯಾಯ ಮಂಡಳಿಗಳ ಸಂಖ್ಯೆ ಎಷ್ಟು ? ಅವುಗಳ ಮುಂದೆಯಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಪ್ರತಿ ಭೂ ನ್ಯಾಯ ಮಂಡಳಿಯಲ್ಲಿ ಗೇಣಿದಾರರ ಪರವಾಗಿ ತೀರ್ಪು ನೀಡಿರುವ ಪ್ರಕರಣಗಳೆಷ್ಟು ?

ಇ) ಭೂಮಾಲೀಕರ ಪರವಾಗಿ ತೀರ್ಪು ನೀಡಿರುವ ಪ್ರಕರಣಗಳೆಷ್ಟು ?

ಈ) ಇನ್ನೂ ತೀರ್ಮಾನವಾಗಬೇಕಾಗಿರುವ ಪ್ರಕರಣಗಳೆಷ್ಟು ?

ಉ) ಯಾವಾಗಿನಿಂದ ಈ ಪ್ರಕರಣಗಳು ಬಾಕಿ ಉಳಿದಿದೆ ಹಾಗೂ ವಿಳಂಬವಾಗುತ್ತಿರಲು ಕಾರಣಗಳೇನು ? (ಎಲ್ಲವನ್ನೂ ಯಾವಾಗ ಪೂರ್ಣಗೊಳಿಸಲಾಗುವುದು ?)

ಶ್ರೀಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ರಾಜ್ಯದಲ್ಲಿರುವ ಭೂ ನ್ಯಾಯ ಮಂಡಳಿಗಳ ಸಂಖ್ಯೆ.—೧೭ ಅವುಗಳ ಮುಂದೆಯಿರುವ ಪ್ರಕರಣಗಳ ಸಂಖ್ಯೆ. ೩೬,೮೦೪

ಆ) ಇದಕ್ಕೆ ಲಗತ್ತಿಸಿರುವ ತಖ್ತೆ ಯಲ್ಲಿ ಉತ್ತರ ನೀಡಿದೆ. (ಜಿಲ್ಲೆವಾರು).

ಇ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) —ಡಿಟೊ—

ಉ) ಭೂ ನ್ಯಾಯ ಮಂಡಳಿಗಳ ಮುಂದಿದ್ದ ಎಲ್ಲಾ ಮೂಲ ಪ್ರಕರಣಗಳನ್ನು ಇತ್ಯರ್ಥ ಗೊಳಿಸಲಾಗಿದೆ. ಈಗ ಬಾಕಿಯಿರುವ ಪ್ರಕರಣಗಳೆಲ್ಲವೂ ಉಚ್ಚ ನ್ಯಾಯಾಲಯದಿಂದ ಹಿಂದಿರುಗಿ ಬಂದಂತಹವು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ನ್ಯಾಯಾವಾದಿಗಳನ್ನು ಭೂ ನ್ಯಾಯ ಮಂಡಳಿಗೆ ಸೇರಿಸುವಂತಾದ್ದರಿಂದ ಹೆಚ್ಚಿನ ಮುಂದೂಡಿಕೆಯಿಂದಾಗಿ ವಿಳಂಬವಾಗುತ್ತಿದೆ. ಆದಾಗ್ಯೂ ಎಲ್ಲಾ ಪ್ರಕರಣಗಳು ಶೀಘ್ರವಾಗಿ ಇತ್ಯರ್ಥ ಮಾಡುವ ದೃಷ್ಟಿಯಿಂದ ಪ್ರತಿ ನ್ಯಾಯ ಮಂಡಳಿಯು ಒಂದು ಬೈಠಕ್‌ಗೆ ೧೦ ಪ್ರಕರಣಗಳಂತೆ ವಿಲೇವಾರಿ ಮಾಡಲು ನಿಗದಿಪಡಿಸಿದ ಪ್ರತಿ ನ್ಯಾಯ ಮಂಡಳಿ ತಿಂಗಳಿಗೆ ೫ ಬಾರಿ ಬೈಠಕ್ ನಡೆಸುವಂತೆ, ಮತ್ತು ಒಂದು ಪ್ರಕರಣಕ್ಕೆ ೩ ಅಥವಾ ೫ ಮುಂದೂಡಿಕೆ ಮಾತ್ರ ಕೊಡುವಂತೆ ಹಾಗೂ ಸದಸ್ಯರುಗಳು ಅದಷ್ಟು ಎಲ್ಲಾ ಬೈಠಕ್‌ಗಳಿಗೂ ಹಾಜರಾಗುವಂತೆ ನಿರ್ದೇಶನ ನೀಡಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2894ಕ್ಕೆ ಅನುಬಂಧ

ದಿನಾಂಕ ೩೧–೮–೧೯೮೮ ರಂದು ವಿವಿಧ ಭೂ ನ್ಯಾಯ ಮಂಡಳಿಗಳಲ್ಲಿ ಗೇಣಿದಾರರ/ಭೂ ಪಾಲೀಕರ ಹಾಗೂ ತೀರ್ಮಾನವಾಗಬೇಕಾಗಿರುವ ಪ್ರಕರಣಗಳ ಸಂಖ್ಯೆಯನ್ನು ತೋರಿಸುವ ತಖ್ತೆ.

ಕ್ರಮ ಸಂಖ್ಯೆ	ಜಿಲ್ಲೆ	ಭೂನ್ಯಾಯ ಮಂಡಳಿಗಳ ಸಂಖ್ಯೆ	ಗೇಣಿದಾರರ ಪರವಾಗಿ ತೀರ್ಮಾನವಾಗಿರುವ ಪ್ರಕರಣಗಳ ಸಂಖ್ಯೆ	ಭೂಪಾಲೀಕರ ಪರವಾಗಿ ತೀರ್ಮಾನವಾಗಿರುವ ಪ್ರಕರಣಗಳ ಸಂಖ್ಯೆ	ತೀರ್ಮಾನವಾಗಬೇಕಾಗಿರುವ ಪ್ರಕರಣಗಳ ಸಂಖ್ಯೆ
೧	೨	೩	೪	೫	೬
೧	ಬೆಂಗಳೂರು	೩	೫೦೧೫	೮೯೧೯	೭೮೩
೨	ಬೆಂಗಳೂರು (ಗ್ರಾ)	೮	೧೬೭೬೬	೧೯೭೮೬	೮೧೩
೩	ಕೋಲಾರ	೧೧	೧೨೭೬೬	೧೧೮೯೩	೨೨೩೫
೪	ಶಿವಮೊಗ್ಗ	೯	೩೩೧೫೯	೨೬೪೧೯	೧೯೦೩
೫	ತುಮಕೂರು	೧೦	೫೫೪೮	೮೪೧೨	೧೫೨೩
೬	ಚಿತ್ರದುರ್ಗ	೯	೨೫೪೪	೪೮೪೭	೫೫೮
೭	ಮೈಸೂರು	೧೧	೮೨೮೭	೧೫೭೧೧	೧೫೮೦
೮	ಚಿಕ್ಕಮಗಳೂರು	೭	೧೧೧೩೨	೬೩೫೧	೩೦
೯	ಹಾಸನ	೮	೧೩೮೮೨	೧೫೪೪೪	೬೨೨
೧೦	ಮಂಡ್ಯ	೭	೮೨೮೭	೬೫೪೦	೧೭೬೧
೧೧	ಕೊಡಗು	೩	೧೦೧೫	೨೭೪೪	೫೮೩೮
೧೨	ದಕ್ಷಿಣ ಕನ್ನಡ	೮	೧೩೬೯೨೦	೩೯೨೪೨	೫೨೦೫
೧೩	ಗುಲ್ಬರ್ಗಾ	೧೦	೧೦೯೭೨	೫೦೭೬೩	೬೯೨
೧೪	ರಾಯಚೂರು	೯	೪೭೬೭	೧೬೯೫೮	೬೭೭
೧೫	ಬೀದರ್	೫	೧೬೪೧	೪೪೪೨	೨೬೦೭
೧೬	ಬಳ್ಳಾರಿ	೮	೬೬೩೨	೧೧೨೯೯	೨೧೮೩
೧೭	ಬೆಳಗಾಂ	೧೦	೫೧೦೪೨	೧೯೨೫೮	೪೨೬೬
೧೮	ಬಿಜಾಪುರ	೧೧	೨೪೨೯೯	೧೭೨೮೯	೪೧೭
೧೯	ಧಾರವಾಡ	೧೭	೩೭೪೧೦	೨೩೬೭೧	೧೯೬೦
೨೦	ಉತ್ತರಕನ್ನಡ	೧೧	೮೦೯೭೬	೧೭೯೭೩	೯೦೬
	ಒಟ್ಟು	೧೭೫	೪,೭೩೦೭೯	೩೨೯೫೩೧೦	೩೬೮೦೪

೧೨–೦೦

ಶ್ರೀ, ಎ. ಲಕ್ಷ್ಮೀಸಾಗರ (ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ).—ಒಂದೊಂದು ಭೂ ನ್ಯಾಯಮಂಡಲಿಯ ಮುಂದೆ ಇರತಕ್ಕಂಥ ಪ್ರಕರಣಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಆ ಅಂಕಿ ಸಂಖ್ಯೆಯನ್ನು ನಾನು ಕೊಟ್ಟಿಲ್ಲ. ಆ ಅಂಕಿ ಸಂಖ್ಯೆಗಳು ನನ್ನ ಹತ್ತಿರ ಇಲ್ಲ. ಜಿಲ್ಲಾವಾರು ವಿವರವನ್ನು ಕೊಟ್ಟಿದ್ದೇನೆ. ಈ ಅಂಶವನ್ನು ಸನ್ಮಾನ್ಯ ಸದಸ್ಯರು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಹೇಳಿ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರದಲ್ಲಿ ಪಟ್ಟಿಯನ್ನು ಲಗತ್ತಿಸಿದ್ದಾರೆ. ಇದರಲ್ಲಿ ಬಾಕಿ ಉಳಿದಿರತಕ್ಕಂಥ ಪ್ರಕರಣಗಳ ಸಂಖ್ಯೆ ೩೯,೮೦೪ ಎಂದು ಹೇಳಿದ್ದಾರೆ. ಈ ೩೬,೮೦೪ ಪ್ರಕರಣಗಳು ಇನ್ನೂ ಉಳಿದುಕೊಂಡು ಬಂದಿವೆ. ಇಷ್ಟು ವಿಳಂಬವಾಗಲು ಕಾರಣ ಏನು ಎಂದು ನನ್ನ ಪ್ರಶ್ನೆ. ಭೂಮಾಲೀಕರ ಪರವಾಗಿ ತೀರ್ಮಾನವಾಗಿರತಕ್ಕಂಥ ಪ್ರಕರಣಗಳ ಸಂಖ್ಯೆ ೩,೨೯೨.೩೩ ಮತ್ತು ಗೇಣಿದಾರರ ಪರವಾಗಿ ತೀರ್ಮಾನವಾಗಿರತಕ್ಕಂಥ ಪ್ರಕರಣಗಳ ಸಂಖ್ಯೆ ೪,೨೩,೦೭೯ ಎಂದು ಹೇಳಿದ್ದಾರೆ. ನಾನು ಕೇಳತಕ್ಕಂಥಾದ್ದು ಸುಮಾರು ೩೬ ಸಾವಿರ ಪ್ರಕರಣಗಳು ಬಹಳ ದಿನಗಳಿಂದ ಬಾಕಿಉಳಿದುಕೊಂಡು ಬಂದಿವೆ, ತಮ್ಮ ಸರಕಾರ ಅಧಿಕಾರಕ್ಕೆ ಬಂದಂಥ ಕಾಲದಲ್ಲಿ ಎಷ್ಟು ಪ್ರಕರಣಬಾಕಿ ಉಳಿದಿತ್ತು. ತಮ್ಮ ಸರಕಾರ ಅಧಿಕಾರಕ್ಕೆ ಬಂದಮೇಲೆ ಎಷ್ಟು ಪ್ರಕರಣಗಳು ತೀರ್ಮಾನವಾಗಿವೆ, ಈ ರೀತಿ ವಿಳಂಬವಾಗುವುದಕ್ಕೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ನ್ಯಾಯವಾದಿಗಳನ್ನು ಭೂ ನ್ಯಾಯಮಂಡಲಿಗಳಲ್ಲಿ ಇಡಬೇಕಾಗಿರುವುದರಿಂದ, ಈ ರೀತಿ ವಿಳಂಬವಾಗುತ್ತಿದೆ ಎಂದು ಹೇಳಿದ್ದೀರಿ. ಭೂ ನ್ಯಾಯಮಂಡಲಿಗಳಲ್ಲಿ ಸಾಮಾನ್ಯವಾಗಿ ಹಣ ಇದ್ದಂಥ ಭೂ ಮಾಲೀಕರು ನ್ಯಾಯವಾದಿಗಳನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಬಡ ಗೇಣಿದಾರರು ನ್ಯಾಯವಾದಿಗಳನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಮತ್ತೆ ಅಪ್‌ಲೆಟ್ ಟ್ರಿಬ್ಯೂನಲ್ ರಚನೆ ಮಾಡಿರುತ್ತೀರಿ. ಕೇಸ್‌ಗಳನ್ನು ಬೇಗ ಇತ್ಯರ್ಥ ಮಾಡುವುದಕ್ಕೆ ಈ ಅಪ್‌ಲೆಟ್ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಲಾಗಿದೆ ಎಂದು ಹೇಳಿದೀರಿ, ಇವುಗಳ ಮುಂದೆ ಎಷ್ಟು ಕೇಸಸ್ ಇವೆ, ಎಷ್ಟು ತೀರ್ಮಾನವಾಗಿದೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕೂ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಅಪ್‌ಲೆಟ್ ಟ್ರಿಬ್ಯೂನಲ್ ಮುಂದೆ ಇರತಕ್ಕಂಥ ಕೇಸ್‌ಗಳ ಸಂಖ್ಯೆ ವಿಚಾರದಲ್ಲಿ ಪ್ರಶ್ನೆ ಕೇಳಿಲ್ಲ, ಆದರ ಬ್ಗ್ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಅದಕ್ಕೆ ಉತ್ತರ ಕಳುಹಿಸಿಕೊಡುತ್ತೇನೆ.

ಎರಡನೆಯದಾಗಿ, ಬಡ ಕಕ್ಷಿಗಾರರಿಗೆ ಸಹಾಯ ಮಾಡತಕ್ಕ ವ್ಯವಸ್ಥೆ ಇದೆಯೇ ಎಂದು ಕೇಳಿದ್ದಾರೆ. ಎಲ್ಲಾ ಭೂ ನ್ಯಾಯ ಮಂಡಲಿಗಳಲ್ಲೂ ಕೂಡಾ ಬಡವರಿಗೆ ಸಹಾಯ ಮಾಡುವುದಕ್ಕೋಸ್ಕರ ಉಚಿತ ಕಾನೂನು ನೆರವು ಸಂಸ್ಥೆ ಆಶ್ರಯದಲ್ಲಿ ಸಹಾಯ ನೀಡತಕ್ಕ ವ್ಯವಸ್ಥೆ ಇದೆ. ಎಲ್ಲಾದರೂ ಇಂತಹ ಸಹಾಯ ಸಿಗದೇ ಹೋದರೆ, ಅದನ್ನು ನನ್ನ ಗಮನಕ್ಕೆ ತಂದರೆ ಅವರಿಗೆ ಅನುಕೂಲ ಮಾಡಿಸಿಕೊಡತಕ್ಕ ವ್ಯವಸ್ಥೆ ಮಾಡುತ್ತೇನೆ. ಆಮೇಲೆ ಏತಕ್ಕೆ ವಿಳಂಬವಾಯಿತು ಎಂಬುದಕ್ಕೆ ಕಾರಣ ಹೇಳಿದ್ದೇನೆ. ಭೂ ನ್ಯಾಯಮಂಡಲಿಗಳ ತೀರ್ಮಾನ ವಿರುದ್ಧ ಹೈಕೋರ್ಟ್‌ನಲ್ಲಿದ್ದಂಥ ಕೇಸ್‌ಗಳನ್ನು ಈಗ ಮತ್ತೆ ವಾಪಸ್ ಕಳುಹಿಸಿಕೊಟ್ಟಿದ್ದಾರೆ. ಅವುಗಳ ಸಂಖ್ಯೆಯನ್ನು ನಾನು ಹೇಳಿದ್ದೇನೆ. ಏತಕ್ಕೆ ವಿಳಂಬವಾಗಿದೆ ಎಂಬುದಕ್ಕೆ ದೊಡ್ಡ ಚರಿತ್ರೆಯೇ ಇದೆ. ಅದು ತಮಗೆ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಅಂಕಿ ಸಂಖ್ಯೆಗಳು ಮಾನ್ಯ ಸದಸ್ಯರಾದ ಶಿವಣ್ಣನವರ ಹತ್ತಿರ ಇರಬಹುದು ನನ್ನ ಹತ್ತಿರ ಇಲ್ಲ. ನನಗೆ ಅವರು ಆ ವಿವರಗಳನ್ನು ಕೊಟ್ಟಿಲ್ಲ ಅವರು ಏನು ಪ್ರಶ್ನೆ ಕೇಳಿದ್ದಾರೆಂದರೆ ಗೇಣಿದಾರರ ಪರವಾಗಿ ತೀರ್ಪು ನೀಡಿರುವ ಪ್ರಕರಣಗಳೆಷ್ಟು ? ಅದಕ್ಕೆ ತಾವು ಉತ್ತರ ಕೊಟ್ಟಿದ್ದೇನೆಂದು ಹೇಳಿದಿರಿ. ಅದು ನನಗೆ ಗೊತ್ತಾಗಲಿಲ್ಲ. ಆಮೇಲೆ ಭೂ ಮಾಲೀಕರ ಪರವಾಗಿ ತೀರ್ಪು ನೀಡಿರುವ ಪ್ರಕರಣಗಳು ಎಷ್ಟು ಎಂದು ಕೇಳಿದ್ದಾರೆ ಅದಕ್ಕೂ ಉತ್ತರ ಕೊಟ್ಟಿದ್ದೇನೆಂದು ಹೇಳಿದಿರಿ. ಆದರೆ ಈ ಮನೆಗೆ ಆ ಉತ್ತರ ಗೊತ್ತಾಗಬೇಕಲ್ಲ. ನಮಗೆ ಆ ಮಾಹಿತಿ ಗೊತ್ತಾಗದಿದ್ದರೆ ನಾವು ಉಪ ಪ್ರಶ್ನೆ ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲಾ ಮಾನ್ಯ ಸದಸ್ಯರಿಗೂ ಉತ್ತರ ಕೊಡತಕ್ಕಂಥ ವ್ಯವಸ್ಥೆ ಇದೆ. ಅದೇ ರೀತಿ ತಮಗೂ ಕೊಟ್ಟಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಸಂತೋಷ. ಈಗ ಮಾನ್ಯಸಭಾಧ್ಯಕ್ಷರೇ ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ನಾವು ೨೦-೨೫ ಪ್ರಕರಣಗಳು ಲ್ಯಾಂಡ್ ಟ್ರಿಬ್ಯುನಲ್‌ಗೆ ಹೋಗಿ ಗೇಣಿದಾರರ ಪರವಾಗಿ ತೀರ್ಪು ಆಗುತ್ತಿದ್ದವು. ಆಗ ಭೂಮಾಲೀಕರು ಹೈಕೋರ್ಟಿಗೆ ಆ ಕೇಸನ್ನು ರಿವಿಜನ್ ಪಿಟಿಷನ್ ಮುಖಾಂತರ ತೆಗೆದುಕೊಂಡು ಹೋಗುತ್ತಿದ್ದರು. ಆದರೆ ನೀವೀಗ ಅಪ್ಲಿಲೇಟ್

ಟ್ರಿಬ್ಯುನಲ್‌ಗಳೆಂದು ಮಾಡಿದ ಮೇಲೆ ಹೈಕೋರ್ಟಿನಲ್ಲಿದ್ದಂತಹ ಎಲ್ಲಾ ಕೇಸ್‌ಗಳು ಈ ಅಪಿಲೇಟ್ ಟ್ರಿಬ್ಯುನಲ್ಸ್‌ಗೆ ವಾಪಸ್ ಬಂದಿವೆ. ಆ ಬಗ್ಗೆ ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಆದರೆ ಈಗ ಏನಾಗಿದೆ ಎಂದರೆ ನಿಮ್ಮ ಜನತಾ ಪಕ್ಷದ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಯಾರ ಪರವಾಗಿ ಎಷ್ಟೆಷ್ಟು ಕೇಸ್‌ಗಳು ತೀರ್ಮಾನವಾಗಿವೆ ಎನ್ನುವ ಅಂಕಿಸಂಖ್ಯೆಗಳನ್ನು ತೆಗೆದುಕೊಳ್ಳಿ, ಅದೇ ೧೯೮೩ನೇ ಇಸವಿಗಿಂತ ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ಯಾರ ಪರವಾಗಿ ಎಷ್ಟೆಷ್ಟು ಕೇಸ್‌ಗಳು ತೀರ್ಮಾನವಾಗಿವೆ ಎನ್ನುವುದನ್ನು ತೆಗೆದುಕೊಂಡರೆ, ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರ ವಿದ್ದಾಗ ಗೇಣಿದಾರರ ಪರವಾಗಿ ಅಗಿರತಕ್ಕಂಥ ತೀರ್ಪುಗಳ ಪರ್ಸೆಂಟೇಜ್ ನೋಡಿ ನಿಮ್ಮ ಸರ್ಕಾರ ಅಧಿಕಾರಕ್ಕೆಬಂದ ಮೇಲೆ ಭೂಮಾಲೀಕರ ಪರವಾಗಿ ಬಂದಿರತಕ್ಕಂಥ ತೀರ್ಪುಗಳ ಪರ್ಸೆಂಟೇಜ್ ಜಾಸ್ತಿ ಆಗಿದೆಯೇ ಹೊರತು ಗೇಣಿದಾರರ ಪರವಾಗಿ ತೀರ್ಪುಗಳು ಬಂದಿಲ್ಲ. ನನಗೆ ಗೊತ್ತಿರುವ ಹಾಗೆ ನೂರಕ್ಕೆ ೯೦-೯೫ ಪರ್ಸೆಂಟ್‌ನಷ್ಟು ಭೂಮಾಲೀಕರ ಪರವಾಗಿಯೇ ಲ್ಯಾಂಡ್ ಟ್ರಿಬ್ಯುನಲ್ಸ್‌ನಲ್ಲಿ ತೀರ್ಪುಗಳು ಬಂದಿವೆ. ಕಾರಣ ಅಲ್ಲಿಗೆ ನಿಮ್ಮ ಪಕ್ಷದ ಸದಸ್ಯರನ್ನು ತೆಗೆದುಕೊಂಡು ಹೋಗಿ ಹಾಕಿ ಭೂಮಾಲೀಕರ ಪರವಾಗಿ ತೀರ್ಪುಗಳು ಕೊಡಿಸಿದ್ದೀರಿ. ಆದರೆ ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ನಮ್ಮ ಪಕ್ಷದ ಸದಸ್ಯರು ಇದ್ದರೂ ಸಹ ಗೇಣಿದಾರರ ಪರವಾಗಿ ತೀರ್ಪುಗಳನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು.—ತಾವು ಪ್ರಶ್ನೆ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆ ಕೇಳುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ ಈ ಸರ್ಕಾರ ಸಂಪೂರ್ಣವಾಗಿ ಭೂಮಾಲೀಕರ ಪರವಾಗಿ ಇರುವುದರಿಂದ ಅಲ್ಲಿನ ಸದಸ್ಯರು ಕೂಡ ಭೂ ಮಾಲೀಕರ ಪರವಾಗಿಯೇ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ತೀರ್ಪುಗಳನ್ನು ಕೊಟ್ಟಿದ್ದಾರೆ. ಆ ಮೂಲಕ ಈ ಭೂ ಸುಧಾರಣಾ ಕಾನೂನಿಗೆ ವಂಚನೆ ಬಗೆದು ಹಾಳು ಮಾಡಿ ಇಟ್ಟಿದ್ದೀರಿ. ಈ ಬಗ್ಗೆ ತಾವು ನನಗೆ ಅಂಕಿ ಸಂಖ್ಯೆಗಳನ್ನು, ವಿವರಗಳನ್ನು ದಯವಾಡಿ ಕೊಡಿ. ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ಗೇಣಿದಾರರ ಪರವಾಗಿ ಪರ್ಸೆಂಟೇಜ್ ಆಫ್ ಡಿಸ್‌ಪೋಜಲ್ಸ್ ಎಷ್ಟು ಆಗಿವೆ, ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಪರ್ಸೆಂಟೇಜ್ ಆಫ್ ಡಿಸ್‌ಪೋಜಲ್ಸ್ ಆಗಿವೆ ಎನ್ನುವುದನ್ನು ಸರ್ಕಾರ ಈ ಸದನದ ಮುಂದೆ ದಯವಾಡಿ ಇಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಧ್ಯಕ್ಷರೇ ಸನ್ಮಾನ್ಯ ಬಂಗಾರಪ್ಪನವರು ಹೇಳಿರತಕ್ಕಂಥಾ ದ್ದರಲ್ಲಿ ಅವರು ಇದರಲ್ಲಿ ರಾಜಕೀಯವನ್ನು ಈ ಪ್ರಶ್ನೆಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ತೀರ್ಪುಗಳು ನೋಡಿ.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೇ ಅವರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಸಹಾನುಭೂತಿಯಿಂದ ಕೇಳಲಿ. ಕಾಂಗ್ರೆಸ್ ಪಕ್ಷವಿದ್ದಾಗ ಎಷ್ಟು ಕೇಸ್‌ಗಳಲ್ಲಿ ಗೇಣಿದಾರರ ಪರವಾಗಿ ತೀರ್ಪುಗಳು ಬಂದಿವೆ ಎನ್ನುವ ಅಂಕಿಅಂಶಗಳನ್ನು ಅವರು ಕೊಟ್ಟಿಲ್ಲ. ಬರೀ ವಾದ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನೀವು ಸದನದ ಮುಂದೆ ಇಡಿ ಎಂದು ನಾನು ಕೇಳಿದ್ದೇನೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಲ್ಪ ದಯವಾಡಿ ಕೇಳಿ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ.—ನಾನು ಅಂಕಿಅಂಶಗಳನ್ನು ಕೊಟ್ಟರೆ ಆಡಳಿತದಲ್ಲಿ ನೀವೇತಕ್ಕೆ ಇರಬೇಕು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸುಮ್ಮನೆ ಕೂಗಾಡಿದರೆ ಪ್ರಶ್ನೆ ಬಗೆಹರಿಯುವುದಿಲ್ಲ.

ಉಪಾಧ್ಯಕ್ಷರು.—ದಯವಾಡಿ ಕುಳಿತುಕೊಳ್ಳಿ ಬಂಗಾರಪ್ಪನವರೇ. ನಾನು ನಿಂತಿದ್ದೇನೆ ದಯವಾಡಿ ಕುಳಿತುಕೊಳ್ಳಿ. ಅವರು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿ ಕೊಡಿ.

ಶ್ರೀ ಎಸ್. ಬಂಗಾರಪ್ಪ —ನಾನು ಅಂಕಿಅಂಶಗಳನ್ನು ಕೊಟ್ಟರೆ ಅವರೇತಕ್ಕೆ ಇರಬೇಕು.

ಉಪಾಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ,

ಶ್ರೀ ಎಸ್. ಬಂಗಾರಪ್ಪ.—ಅಂಕಿ ಅಂಶಗಳನ್ನು ನಾನು ಕೊಡಬೇಕೆಂದು ನಿಮ್ಮ ಸರ್ಕಾರದ ಮಿನಿಸ್ಟರ ಒರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಅವರು ಪ್ರಶ್ನೆ ಕೇಳಿದ್ದಾರೆ. ನಾನು ಉತ್ತರವನ್ನು ಹೇಳಂತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇಷ್ಟಿನೇ ಇಸವಿಗಿಂತ ಹಿಂದೆ ಆಗಿರುವ ಅಂಕಿ ಅಂಶಗಳನ್ನು ತಾವು ಹೇಳ್ಕಿ.

ಶ್ರೀ ಎ. ಲಕ್ಷ್ಮೀಸಾಗರ್,—ಸನ್ಮಾನ್ಯ ಬಂಗಾರಪ್ಪನವರು ಏನೋ ತಿಳಿದುಕೊಂಡಿದ್ದಾರೆ. ಗೇಣಿದಾರರ ಹಿತ ರಕ್ಷಣೆ, ಮತ್ತು ಅವರ ಆಗುಹೋಗುಗಳು ಮುಂತಾದವುಗಳ ಗುತ್ತಿಗೆ ಅವರ ಒಬ್ಬರಿಗೆ ಮಾತ್ರ ಇದೆಯೆಂದು ಅವರು ತಿಳಿದುಕೊಂಡಿರುವ ಹಾಗಿದೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಒಬ್ಬರಿಗೆ ಅವರ ಗುತ್ತಿಗೆ ಎಂದು ತಿಳಿದುಕೊಂಡಿದ್ದೀರಾ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಏಕೆ ಕೂಗಾಡುತ್ತೀರಿ ?

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಒಬ್ಬರೇ ಗುತ್ತಿಗೆ ತೆಗೆದುಕೊಂಡಿರುವುದು ಎಂದು ತಿಳಿದು ಕೊಂಡಿದ್ದೀರಾ ?

(ಗೊಂದಲ)

ಉಪಾಧ್ಯಕ್ಷರು.—ಯಾರಿಗೂ ಪ್ರವೋಕ್ ಆಗದ ಹಾಗೆ ಮಾತನಾಡಿ.

ಶ್ರೀ ಎ. ಲಕ್ಷ್ಮೀಸಾಗರ್,—ಅವರು ಪ್ರವೋಕ್ ಆದ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ನಾವು ಏನು ಉತ್ತರ ಕೊಡಬೇಕು ?

ಶ್ರೀ ಎಸ್. ಬಂಗಾರಪ್ಪ.—ನೀವು ಏಕೆ ಗುತ್ತಿಗೆ ಎನ್ನುವ ಪದವನ್ನು ಉಪಯೋಗ ಮಾಡುತ್ತೀರಿ ?

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಕೂಗಾಡುವುದು ಎಂದರೆ ಏನು ? (ಗೊಂದಲ)ಅವರು ಕೂಗಾಡಿದರೆ ಯಾರು ಹೆದರುವುದಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ವೈಯಕ್ತಿಕ ವಿಷಯವಾಗಿ ನಾನು ಮಾತನಾಡುತ್ತಿಲ್ಲ ಸರ್ಕಾರದ ಬಗ್ಗೆ ಮಾತನಾಡುತ್ತಿದ್ದೇನೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನಾನು ನನ್ನ ಸ್ವಂತ ವಿಚಾರವನ್ನು ಹೇಳುತ್ತಿಲ್ಲ. ಸರ್ಕಾರದ ಪರವಾಗಿ ಉತ್ತರ ಹೇಳುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಆಪಾದನೆ ಮಾಡಿ ಹೇಳಿರುತಕ್ಕ ವಿಚಾರದಲ್ಲಿ ಸ್ವಲ್ಪವೂ ಕೂಡ ನಿಜಾಂಶ ಇಲ್ಲ. ಕಾಂಗ್ರೆಸ್ ಸರ್ಕಾರ ಇದ್ದಾಗ ಗೇಣಿದಾರರ ಪರವಾದಂಥ ತೀರ್ಮಾನಗಳು ಹೆಚ್ಚು ಆಗಿದ್ದವು ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ಅಂಕಿ ಅಂಶಗಳು ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಂಕಿ ಅಂಶಗಳನ್ನು ಯಾವಾಗ ಕೊಡುತ್ತೀರಿ ?

ಉಪಾಧ್ಯಕ್ಷರು.—ದಯವಿಟ್ಟು ಅವರು ಉತ್ತರ ಹೇಳಲಿ.

ಶ್ರೀ ಎಸ್. ಬಂಗಾರಪ್ಪ.—ಅವರು ಉತ್ತರ ಹೇಳುವುದಕ್ಕೆ ನಾನು ಅಡ್ಡ ಬರುವುದಿಲ್ಲ. ನೀವು ಇವತ್ತಲ್ಲ ನಾಳೆ ಜನರ ಹತ್ತಿರ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ ಅಂಕಿ ಅಂಶಗಳನ್ನು ಯಾವಾಗ ಕೊಡುತ್ತೀರಿ ಎಂದು ಪ್ರಶ್ನೆ ಕೇಳುವುದು ಸಹಜ ಅಲ್ಲವೆ ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಇನ್ನು ಎರಡನೆಯದಾಗಿ ಹೇಳುವುದೇನೆಂದರೆ, ಕಾಂಗ್ರೆಸ್ ಸರ್ಕಾರ ಇದ್ದಾಗ ಗೇಣಿದಾರರ ಪರವಾಗಿ ಹೆಚ್ಚು ಕೇಸ್‌ಗಳು ತೀರ್ಮಾನ ಆಗಿದ್ದವು ಎನ್ನುವ ಬಗ್ಗೆ ಅಂಕಿ ಸಂಖ್ಯೆಗಳನ್ನು ಅವರು ಕೂಡ ಕೊಡಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಅಂಕಿ ಅಂಶಗಳನ್ನು ಕೊಡಬೇಕೇ ನೀವೇ ಅದನ್ನು ಒದಗಿಸಿಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಪ್ರಶ್ನೆ ಕೇಳಿದಿರಿ. ಉತ್ತರವನ್ನು ಸಮಾಧಾನದಿಂದ, ಸೌಜನ್ಯದಿಂದ ತಾವು ಕೇಳಬೇಕು. ನನ್ನ ಉತ್ತರದಿಂದ ನಿಮಗೆ ಸಮಾಧಾನವಾಗಬೇಕೆಂದು ನನ್ನ ಆಸೆ. ಈ ಉತ್ತರದಿಂದ ನಿಮಗೆ ಸಮಾಧಾನ ಆಗದೇ ಇರಬಹುದು. ಅದಕ್ಕೆ ನಾನು ಜವಾಬ್ದಾರನಲ್ಲ. ಆದರೆ, ಪ್ರಶ್ನೆಯನ್ನು ಕೇಳಿದ ಮೇಲೆ ಉತ್ತರವನ್ನು ಕೇಳತಕ್ಕ ಸೌಜನ್ಯವನ್ನು ತಾವು ತೋರಿಸಬೇಕಾಗುತ್ತದೆ. ಇಲ್ಲದಿದ್ದರೆ ನಿಮಿಷ ನಿಮಿಷಕ್ಕೂ ಮಧ್ಯೆ ಪ್ರವೇಶ ಮಾಡಿದರೆ ನಾನು ಉತ್ತರ ಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವು ಮಾತನಾಡುವಾಗ ನೀವು ಮಾತನಾಡಲಿಲ್ಲವೆ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹಾಗೆ ಮಾತನಾಡಲಿಲ್ಲ.....

ಶ್ರೀ ಪಟವಂಕಿ ರತ್ನಾಕರ್.—ಅಧ್ಯಕ್ಷರೇ.....

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.....

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಅನುಬಂಧದಲ್ಲಿನ ನಾಲ್ಕನೇ ಕಲಮ್‌ನಲ್ಲಿ ಕೊಟ್ಟಿದ್ದೇನೆ. ಗೇಣಿದಾರರ ಪರವಾಗಿ ತೀರ್ಪು ನೀಡಿರುವ ಪ್ರಕರಣಗಳ ಸಂಖ್ಯೆ : ೪,೭೩ ೦೭೯. ಭೂಮಾಲೀಕರ ಪರವಾಗಿ ತೀರ್ಪು ನೀಡಿರುವ ಸಂಖ್ಯೆ : ೩,೨೯,೨೩೧. ಇದರಲ್ಲಿ ನಾವು ಕಳೆದರೆ ೧,೪೩,೨೯೮ ಪ್ರಕರಣಗಳಲ್ಲಿ ಗೇಣಿದಾರರ ಪರವಾಗಿ ತೀರ್ಮಾನವಾಗಿದೆ ಎಂದು ವ್ಯಕ್ತವಾಗುತ್ತದೆ. He goes on shooting the question. It is for the Hon'ble Deputy Speaker to control this.....

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ.....

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಇಷ್ಟು ನನ್ನ ಹತ್ತಿರ ಇರತಕ್ಕಂಥ ಅಂಕಿಸಂಖ್ಯೆಗಳು, ಅದನ್ನು ನೀವು ಯಾವಾಗ ಆಯಿತು ಯಾರ ಅವಧಿಯಲ್ಲಿ ಆಯಿತು ಅಂದರೆ ಈ ಪ್ರಶ್ನೆ ಅದಕ್ಕೆ ಸಂಬಂಧಪಟ್ಟಿಲ್ಲ. ತಾವುಗಳು ಕೇಳಿದ ಅಂಕಿಅಂಶಗಳು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ನಾನು ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ನಾನು ಪೂರ್ಣವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಬಂಗಾರಪ್ಪ ನವರು ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ಕೇಳಿದಂಥ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಈ ಸಂದರ್ಭದಲ್ಲಿ ಉತ್ತರವು ಇಲ್ಲದಿರಬಹುದು. ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ. ಹಾಗಾದರೆ ಅಧಿವೇಶನದ ಪ್ರಸಕ್ತ ಅವಧಿಯು ಮುಗಿಯುವುದರೊಳಗಾಗಿ ಆ ಉತ್ತರವನ್ನು ಕೊಡುವುದಕ್ಕೆ ಸಾಧ್ಯವೆ ?

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ಕೊಡಬಹುದು. The present question don't arise from out of the question now tabled. Let him put a separate question what the Hon'ble Member

wants, I will certainly supply all the information within the control of the Government.....

ಅಧ್ಯಕ್ಷರು.—ತಾವುಗಳು ಪ್ರತ್ಯೇಕವಾಗಿ ನೋಟಿಸ್‌ನ್ನು ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಾದ ಶಿವಣ್ಣನವರು ಇದೇ ಪ್ರಶ್ನೆಯಲ್ಲಿ ೧೯೮೩ರಿಂದ ಗೇಣಿದಾರರ ಪರವಾಗಿ ಮತ್ತು ಭೂಮಾಲೀಕರ ಪರವಾಗಿ ಎಷ್ಟು ತೀರ್ಪುಗಳು ಆಗಿವೆ ಎಂದು ಈ ಪ್ರಶ್ನೆಯನ್ನು ಕೇಳಿದ್ದಲ್ಲಿ ತಾವುಗಳು ಉತ್ತರವನ್ನು ಕೊಡುತ್ತಿದ್ದೀವೆ ? ಮಾನ್ಯ ಸದಸ್ಯರು ಅದನ್ನು ಕೇಳಲಿಲ್ಲ ಎನ್ನುವ ಕಾರಣದಿಂದಾಗಿ ಈಗ ಹಾಗೆ ಹೇಳುತ್ತಿದ್ದೀರಿ. The Hon'ble Minister cannot withhold all those things. I agree with him, he require little more time to bifurcate this reply. ಇದು ಉಪ ಪ್ರಶ್ನೆಗೆ ಬರುವುದಿಲ್ಲವೆ ? ತವಂಗೆ ದಯಮಾಡಿ ಈ ಉಪಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎಂ. ಶಿವಣ್ಣ.—ಮಾನ್ಯ ಸಚಿವರಿಗೆ ಈ ಉಪಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಏನು ತೊಂದರೆ ಇದೆ ?

SRI LAKSHMI SAGAR....I want separate notice. It doesn't come within the purview of the present question now tabled.

SRI S. BANGARAPPA.—It is well within the purview of the question now tabled. ಸಭೆಯಲ್ಲಿ ನಾವು ಪ್ರಶ್ನೆ ಕೇಳಬಹದು. But the Government wants to evade the question...

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ತಮ್ಮ ಪ್ರಶ್ನೆಗೆ ಪ್ರತ್ಯೇಕವಾದ ನೋಟೀಸ್ ಕೊಟ್ಟು ಕೇಳಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಸೂಕ್ತ ರೀತಿಯಲ್ಲಿ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಶಿವಣ್ಣ.—ನನ್ನ ಪ್ರಶ್ನೆ ಇಷ್ಟೇ. ೧೯೮೩ಕ್ಕಿಂತ ಮೊದಲು ಭೂನ್ಯಾಯಮಂಡಳಿಗಳ ಮುಂದೆ ತೀರ್ಮಾನ ಆಗಿರತಕ್ಕಂಥ ಪ್ರಕರಣಗಳು ಹೈಕೋರ್ಟ್‌ಗೆ ಹೋಗಿ ಬಂದಮೇಲೆ ಇವೊತ್ತಿನ ದಿವಸ ಅವುಗಳನ್ನು ತಿದ್ದಿ, ಮಾಡಿ, ಭೂಮಾಲೀಕರ ಪರವಾಗಿ ತೀರ್ಪು ಕೊಡತಕ್ಕಂಥ ಪ್ರಕರಣಗಳು ಆಗುತ್ತಾ ಇವೆ. ೧೯೮೩ ರಿಂದ ಈಚೆಗೆ ಎಷ್ಟು ಪ್ರಕರಣಗಳನ್ನು ಭೂ ಮಾಲೀಕರ ಪರವಾಗಿ ಮತ್ತು ಎಷ್ಟು ಪ್ರಕರಣಗಳನ್ನು ಗೇಣಿದಾರರ ಪರವಾಗಿ ತೀರ್ಮಾನ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಏಕೆಂದರೆ ೮೩ಕ್ಕೆ ಹಿಂದೆ ಗೇಣಿದಾರರ ಪರವಾಗಿ ತೀರ್ಮಾನ ಬಂದಿದ್ದ ಪ್ರಕರಣಗಳನ್ನು ೮೩ರ ನಂತರ ಭೂಮಾಲೀಕರ ತಿರುಗುಮುರುಗಾಗಿವೆ.

ಶ್ರೀ ಎ. ಲಕ್ಷ್ಮೀಸಾಗರ್.—ಸದಸ್ಯರು ಮೊದಲು ೮೩ರಿಂದೀಚೆಗೆ ಭೂನ್ಯಾಯಮಂಡಳಿಯಲ್ಲಿ ತೀರ್ಮಾನವಾದ ಪ್ರಕರಣಗಳನ್ನು ಕೇಳುತ್ತಿದ್ದಾರೋ ಅಥವಾ ಅಪಿಲೇಟ್ ಟ್ರಿಬ್ಯೂನಲ್ಸ್ ಮುಂದೆ ಇರುವ ಪ್ರಕರಣಗಳನ್ನು ಕೇಳುತ್ತಿದ್ದಾರೋ ಸ್ಪಷ್ಟವಾಗಿ ಹೇಳಲಿ. ಅಥವಾ ಎರಡನ್ನೂ ಕೇಳುತ್ತಿದ್ದಾರೋ ತಿಳಿಸಲಿ. ಒಂದು ಪಕ್ಷ ಎರಡೂ ಕೇಳುವುದಾದರೆ ಈ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ ಮತ್ತು ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ತರಿಸಿಕೊಡುತ್ತೇನೆ, ಏಕೆಂದರೆ ರಾಜ್ಯದಲ್ಲಿ ೧೨೫ ತಾಲ್ಲೂಕು ಪಟ್ಟದ ಭೂ ನ್ಯಾಯಮಂಡಲಿಗಳಿದ್ದು ಅವುಗಳಿಂದ ಉತ್ತರ ತರಿಸಿಕೊಡಲು ಸಮಯ ಬೇಕಾಗುತ್ತದೆ. ಈಗ ಭೂನ್ಯಾಯಮಂಡಲಿ ಮುಂದೆ ತಾಲ್ಲೂಕು ಮಟ್ಟದಲ್ಲಾಗಲಿ ಜಿಲ್ಲಾ ಮಟ್ಟದಲ್ಲಾಗಲಿ ವಕೀಲರ ಪ್ರವೇಶಕ್ಕೆ ಸುಪ್ರೀಮ್ ಕೋರ್ಟ್ ಆದೇಶದಂತೆ ಅವಕಾಶ ಇದೆ. ತಾಲ್ಲೂಕು ಮಟ್ಟದ ಭೂನ್ಯಾಯಮಂಡಲಿಯ ತೀರ್ಮಾನದ ವಿರುದ್ಧ ಜಿಲ್ಲಾ ಮಟ್ಟದ ನ್ಯಾಯಮಂಡಳಿಗೆ ಹೋಗಬಹುದು. ಅಲ್ಲಿ ನೀವು ಡಾಕ್ಯುಮೆಂಟರಿ ಎವಿಡೆನ್ಸ್ ಅಥವಾ ಓರಲ್ ಎವಿಡೆನ್ಸ್ ಕೊಡಬಹುದು, ಅಥವಾ ವಕೀಲರನ್ನು ಇಟ್ಟುಕೊಳ್ಳಬಹುದು. ಈ ರೀತಿ ಪೂರ್ಣ ಅವಕಾಶ ಮಾಡಿಕೊಡಬೇಕೆಂಬ ತೀರ್ಮಾನ ಇದೇ ಸಭೆಯಲ್ಲಾಗಲಿ. ವಿರೋಧಪಕ್ಷದ ಸದಸ್ಯರ ಅನುಮತಿಯಿಂದಲೇ ಜಿಲ್ಲಾ ಮಟ್ಟದ ಟ್ರಿಬ್ಯೂನಲ್‌ಗಳ ರಚನೆಯಾಗಿವೆ.

ಶ್ರೀ ಎಂ. ರಾಮಪ್ಪ.—ನಮ್ಮ ಅನುಮತಿಗೆ ನೀವು ಬೆಲೆ ಕೊಟ್ಟಿಲ್ಲ, ನಿಮ್ಮ ಮೆಜಾರಿಟಿಯಿಂದ ಮಾಡಿಕೊಂಡಿದ್ದೀರಿ. ಸುಮ್ಮನೆ ನಮ್ಮನ್ನೇಕೆ ಎಳೆಯುತ್ತೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿದ್ದುದು ಕಾನೂನು ಬದಲಾವಣೆ ಮಾಡಿದಾಗ ವಿರೋಧ ಪಕ್ಷದ ನಾಯಕರನ್ನು ಕೇಳಿ ಮಾಡಿದ್ದೇವೆ ಎಂದು ಅಷ್ಟೇ.

ಶ್ರೀ ಎಂ ಶಿವಣ್ಣ.—ಇನ್ನೊಂದೇ ಸಣ್ಣ ಪ್ರಶ್ನೆ. ಲ್ಯಾಂಡ್ ಟ್ರಿಬ್ಯೂನಲ್ಸ್ ಸಿಟ್ಟಿಂಗ್ಸ್ ತೀವ್ರವಾಗಿ ಆಗುತ್ತಿಲ್ಲ, ಅನೇಕ ಕಡೆ ತಿಂಗಳಿಗೊಂದೂ ಆಗುತ್ತಿಲ್ಲ. ಬೇಕಾದಷ್ಟು ಕೇಸುಗಳು ಪೆಂಡಿಂಗ್ ಇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅವ್ಯವಸ್ಥೆಗಳಿಗೆ ಸೂಕ್ತ ತಿಳಿವಳಿಕೆ ಕೊಡಲು ಪ್ರಯತ್ನ ಮಾಡುತ್ತೇನೆ.

ರಾಜ್ಯದಲ್ಲಿ ಮುಚ್ಚಲ್ಪಟ್ಟಿರುವ ಕಾರ್ಖಾನೆಗಳ ಬಗ್ಗೆ.

೩೦೪೧. **ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).**—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ದಾವಣಗೆರೆಯ ಮೂರು ಹತ್ತಿ ಗಿರಣಿಗಳು ಮೈಸೂರಿನ ಕೆ. ಆರ್. ಮಿಲ್ಸ್, ಬೆಂಗಳೂರಿನ ಆಲೆಂಬಿಕ್ ಗ್ಲಾಸ್ ಇಂಡಸ್ಟ್ರೀಸ್, ದೀಪಕ್ ಇನ್ಸೂಲೇಟೆಡ್ ಕೇಬಲ್ಸ್ ಕಾರ್ಪೊರೇಷನ್, ಸಿಫಾನಿ ಆಟೋಮೋಬೈಲ್ ಹಾಗೂ ತುಮಕೂರಿನ ಚಾಮುಂಡಿ ಮೊಪೆಡ್ಸ್ ಸಂಸ್ಥೆಗಳು ಎಷ್ಟು ದಿನಗಳಿಂದ ಹಾಗೂ ಎಷ್ಟು ವರ್ಷಗಳಿಂದ ಮುಚ್ಚಿವೆ ?

೨. ಮುಚ್ಚುವಿಕೆಯಿಂದ ಎಷ್ಟು ಜನ ಕೆಲಸಗಾರರು ಕೆಲಸ ಕಳೆದುಕೊಂಡಿದ್ದಾರೆ ?

೩. ಈ ಫ್ಯಾಕ್ಟರಿ, ಮಿಲ್ಸ್‌ಗಳನ್ನು ತೆಗೆಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್(ಕೈಗಾರಿಕಾ ಸಚಿವರು).—

೧. ಮತ್ತು ೨.

ಚಿಟಗೇರಿ ಟೆಕ್ಸ್‌ಟೈಲ್ಸ್‌ಮಿಲ್ಸ್ ದಾವಣಗೆರೆ	೧೮-೪-೧೯೮೭	ಸುಮಾರು ೩೫೦ ಜನ
ಗಣೇಶನ್ ಮತ್ತು ಸಿದ್ದೇಶ್ವರ ಟೆಕ್ಸ್‌ಟೈಲ್ಸ್ ಮಿಲ್ಸ್ ದಾವಣಗೆರೆ	೧೦-೬-೧೯೮೭	ಸುಮಾರು ೬೫೦ ಜನ (ಗಣೇಶನ್ ಟೆಕ್ಸ್‌ಟೈಲ್ಸ್) ಸುಮಾರು ೭೦೦ ಜನ (ಸಿದ್ದೇಶ್ವರ ಟೆಕ್ಸ್‌ಟೈಲ್)
ಕೆ. ಆರ್. ಮಿಲ್ಸ್, ಮೈಸೂರು	ಜೂನ್ ೧೯೮೪	ಸುಮಾರು ೨೮೦೦ ಜನ
ಆಲೆಂಬಿಕ್ ಗ್ಲಾಸ್ ಇಂಡಸ್ಟ್ರೀಸ್, ಬೆಂಗಳೂರು	೧೫-೧೧-೧೯೮೪	ಸುಮಾರು ೮೦೦ ಜನ
ದೀಪಕ್ ಇನ್ಸೂಲೇಟೆಡ್ ಕೇಬಲ್ಸ್ ಕಾರ್ಪೊರೇಷನ್, ಬೆಂಗಳೂರು	೩-೭-೧೯೮೭	ಸುಮಾರು ೫೦೦ ಜನ
ಸಿಫಾನಿ ಆಟೋಮೊಬೈಲ್ಸ್ ಬೆಂಗಳೂರು	೨೪-೫-೧೯೮೮	ಸುಮಾರು ೨೭೦ ಜನ
ಚಾಮುಂಡಿ ಮೊಪೆಡ್ಸ್ ತುಮಕೂರು	೨-೫-೧೯೮೭	ಸುಮಾರು ೫೬೦ ಜನ

೩. ದಾವಣಗೆರೆಯ ಹತ್ತಿ ಗಿರಣಿಗಳು, ಮೈಸೂರಿನ ಕೆ ಆರ್. ಮಿಲ್ಸ್ ಮತ್ತು ತುಮಕೂರಿನ ಚಾಮುಂಡಿ ಮೊಪೆಡ್ಸ್ ಕಂಪೆನಿಗಳು ಹಣಕಾಸಿನ ತೊಂದರೆಗಳಿಂದ ರೋಗಗ್ರಸ್ಥವಾಗಿದೆ ಹೊರತು ಯಾವುದೇ ಕಾರ್ಮಿಕರ ಬೇಡಿಕೆಗಳ ಕಾರಣಕ್ಕಾಗಿ ಮುಚ್ಚಿಲ್ಲ ಈ ಎಲ್ಲಾ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಷಯಗಳು ಬಿ ಐ.ಎಫ್.ಆರ್. ದೆ ಲಿ ಹಾಗೂ ಐ.ಡಿ.ಬಿ.ಐ. ಮುಂದೆ ಇವೆ. ದಾವಣಗೆರೆಯಲ್ಲಿರುವ ಹತ್ತಿ ಗಿರಣಿಗಳನ್ನು ಪ್ರಾರಂಭಿಸಲು ಮಾತುಕತೆ ನಡೆಯುತ್ತಿವೆ. ಚಿಗಟೇರಿ ಟೆಕ್ಸ್‌ಟೈಲ್ಸ್ ಮಿಲ್ಸ್‌ನ್ನು